(ಇಂದು ದಿನಾಂಕಃ 05-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ ಃ</u>**

1. ಸರ್ವೆ ನಂಬರ 44 ಕ್ಕೆ ಸಂಬಂಧ ಪಟ್ಟಂತೆ ರೆಜಿಸ್ಟಟ್ರಿ ಪತ್ರವನ್ನು ನಾನು ನೋಡಿಲ್ಲ. ಸರ್ವೆ ನಂಬರ 44 ಕ್ಕೆ ಸಂಬಂಧ ಪಟ್ಟಂತೆ ಖರೀದಿ ಪತ್ರವನ್ನು ನಾನು ನೋಡಿಲ್ಲ ಆದ್ದರಿಂದ ಅದಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ನೋಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ರೆಜಿಸ್ಟಟ್ರಿ ಎಂದು ಬರೆಸಿಲ್ಲ ಕಾಗದ ಪತ್ರ ಎಂದು ಬರೆಸಿರುತ್ತೇನೆ. ಆ ಜಮೀನಿಗೆ ಸಂಬಂಧ ಪಟ್ಟಂತೆ ಬಿಳಿ ಕಾಗದ ಇದೆ ಅಥವಾ ಸ್ಟ್ಯಾಂಪ ಇದೆ ನನಗೆ ಗೊತ್ತಿಲ್ಲ. ಕಾಗದ ಪತ್ರ ಇದೆ ಎಂದು ಹೇಗೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಾನು ನೋಡಿರುತ್ತೇನೆ ನನಗೆ ಗೊತ್ತಿದೆ ಎಂದು ಹೇಳುತ್ತಾರೆ. ನಾನು ನೋಡಿರುವ ದಾಖಲೆಯಲ್ಲಿ 3 ಎಕರೆ 29 ಗುಂಟೆಯ ಜಮೀನಿಗೆ ಸಂಬಂಧಪಟ್ಟಂತೆ ಚರ್ತುರ ಸೀಮೆ ಬರೆದಿತ್ತು. ಸದರಿ ಜಮೀನಿನ ಪೂರ್ವಕ್ಕೆ ಭೀಮು ಗೇಮುರವರ ಹೊಲ,ಪಶ್ಚಿಮಕ್ಕೆ ಘಟ್ಟ, ಉತ್ತರಕ್ಕೆ ಘಟ್ಟ ಮತ್ತು ದಕ್ಷಿಣಕ್ಕೆ ಬಂಡಪ್ಪ ಮತ್ತು ಹಣಮಪ್ಪರವರ ಜಮೀನು ಎಂದು ಬರೆದಿತ್ತು. ಕಾಗದ ಪತ್ರವನ್ನು ನಾನು ನೋಡಿ ಸುಮಾರು 35 ವರ್ಷ ಆಯಿತು. ಕಾಗದ ಪತ್ರವನ್ನು ನಾನು ಎಲ್ಲಿ ನೋಡಿದೆ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿ ನೋಡಿದ್ದೇನೆ ಎಂದು ಹೇಳುತ್ತಾರೆ.

2. ಸರ್ವೆ ನಂಬರ 44 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ 7 ಎಕರೆ ಚಿಲ್ಲರೆ ಗುಂಟೆ ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ಕಂದಾಯ ದಾಖಲಾತಿ ಸುಮಾರು 40 ವರ್ಷಗಳಿಂದ ಯಾರ ಹೆಸರಿನಲ್ಲಿ ಇದೆ ಎಂದು ನಾನು ನೋಡಿಲ್ಲ. ರಾಮಣ್ಣ ತಂದೆ ಯಲಪ್ಪ ಎಂಬುವವರು ನನಗೆ ಪರಿಚಯ ಇರುತ್ತಾರೆ. ಸಿದ್ದಪ್ಪ ತಂದೆ ಹಾಶಪ್ಪ ಎಂಬುವವರು ನನಗೆ ಪರಿಚಯ ಇರುತ್ತಾರೆ. ಸರ್ವೆ ನಂಬರ 44 ಕಂದಾಯ ದಾಖಲಾತಿ ಸುಮಾರು 40 ವರ್ಷಗಳಿಂದ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸಾಕ್ಷಿ ಇದ್ದಿರಬಹುದು ಅದು ಸರಿಇಲ್ಲ ಎಂದು ಹೇಳುತ್ತಾರೆ. ರಾಮಣ್ಣ ತಂದೆ ಯಲಪ್ಪರವರು ಮೊದಲು ಸರ್ವೆ ನಂಬರ 44 ಸ್ವಾಧೀನದಾರರು ಇದ್ದರು ಎಂದರೆ ಸರಿ. ಸರ್ವೆ ನಂಬರ 44 ರಲ್ಲಿ ಪ್ರತಿವಾದಿಗಳ ಜಮೀನಿನ ಪೂರ್ವಕ್ಕೆ ರುಪಲಾರವರ ಜಮೀನು, ಪಶ್ಚಿಮಕ್ಕೆ ಸರಕಾರಿ ಘಟ್ಟ ಮತ್ತು ರಾಮಚಂದ್ರರವರು ಸ್ವಾಧೀನದಲ್ಲಿ ಇರುವ ಜಮೀನು, ಉತ್ತರಕ್ಕೆ ಘಟ್ಟ ಮತ್ತು ದಕ್ಷಿಣಕ್ಕೆ ಶಾಮರಾವ ಮತ್ತು ಭೀಮರಾವರವರ ಜಮೀನು ಇದೆ ಎಂದರೆ ಸರಿ. ರಾಮಚಂದ್ರರವರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಹೇಳುತ್ತಿರುವ ಜಮೀನಿನ ಪೂರ್ವಕ್ಕೆ

ಹಣಮಂತಪ್ಪ ಮತ್ತು ಬಂಡಪ್ಪ , ಪಶ್ಚಿಮಕ್ಕೆ ಘಟ್ಟ , ಉತ್ತರಕ್ಕೆ ಘಟ್ಟ ಮತ್ತು ದಕ್ಷಿಣಕ್ಕೆ ವಾರಿ ಇದೆ ಎಂದು ಹೇಳಿರುವುದು ಸರಿ ಇರುತ್ತದೆ. ಸರ್ವೆ ನಂಬರ 44 ರಲ್ಲಿ ಪ್ರತಿವಾದಿಗಳ ಜಮೀನಿನ ಪೂರ್ವಕ್ಕೆ ರುಪಲಾರವರ ಜಮೀನು, ಪಶ್ಚಿಮಕ್ಕೆ ಸರಕಾರಿ ಘಟ್ಟ ಮತ್ತು ರಾಮಚಂದ್ರರವರು ಸ್ವಾಧೀನದಲ್ಲಿ ಇರುವ ಜಮೀನು, ಉತ್ತರಕ್ಕೆ ಘಟ್ಟ ಮತ್ತು ದಕ್ಷಿಣಕ್ಕೆ ಶಾಮರಾವ ಮತ್ತು ಭೀಮರಾವರವರ ಜಮೀನು ಇದೆ ಈ ಜಮೀನಿನ ಸ್ವಾಧೀನದಲ್ಲಿ ಸುಮಾರು 50-60 ವರ್ಷಗಳಿಂದ ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಾನು ರಾಮಚಂದ್ರರವರು ಸ್ವಾಧೀನದಲ್ಲಿದ್ದ ಜಮೀನನ್ನು ನೋಡಿರುತ್ತೇನೆ, ಸಿದ್ದಪ್ಪ ಯಾವುದೆ ಜಮೀನಿನ ಸ್ವಾಧೀನದಲ್ಲಿಲ್ಲ. ಶಿವಪ್ಪ ಹೈಬತಿ ಮತ್ತು ಸಿದ್ದಪ್ಪಾ ಹೈಬತಿಯವರು ಪಾಲು ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ದಾಖಲೆ ನಾನು ನೋಡಿಲ್ಲ. ಶಿವಪ್ಪ ಹೈಬತಿ ಮತ್ತು ಸಿದ್ದಪ್ಪಾ ಹೈಬತಿಯವರು ಪಾಲು ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳುತ್ತಿದ್ದು ಆ ಪಾಲಿನ ಪ್ರಕಾರ ಪ್ರತ್ಯೇಕವಾಗಿ ಪಹಣಿ ಆಗಿರುವ ಬಗ್ಗೆ ನಾನು ನೋಡಿಲ್ಲ.

3. ನನಗೆ ಗೊತ್ತಿದ್ದಂತೆ ಸರ್ವೆ ನಂಬರ 44 ಯಾವತ್ತು ಅಳತೆ ಆಗಿರುವುದಿಲ್ಲ. ಸರ್ವೆ ನಂಬರ 44 ರಲ್ಲಿ ವಾದಿಗಳು ಯಾವತ್ತು ಸ್ವಾಧೀದಲ್ಲಿ ಮತ್ತು ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ತೆಗೆದುಕೊಂಡಾಗಿನಿಂದ ಬಿಟ್ಟಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ ಮೊದಲು ರಾಮಣ್ಣ ತಂದೆ ಯಲಪ್ಪ ಸ್ವಾಧೀನದಲ್ಲಿದ್ದರು ಅವರ ನಂತರ ನಾಗಪ್ಪ ತಂದೆ ರಾಮಣ್ಣ ಮುಂದೆ ಅವರ ಮಗ ರಾಮಣ್ಣ ತಂದೆ ನಾಗಪ್ಪ ಇದ್ದರು ಎಂದರೆ ಸರಿ. ಸರ್ವೆ ನಂಬರ 44 ರ 7 ಎಕರೆ 18 ಗುಂಟೆ ಜಮೀನಿನ ಮಾಲಿಕ ಮತ್ತು ಸ್ವಾಧೀನದಿಂದ ವಾದಿಯು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.